5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)

ಎಸ್.ಸಿ. ಸಂ:10011/2021

ಪಿಡಬ್ಲ್ಯೂ 05
ಸಿಡಬ್ಲ್ಯೂ 05

| | | |
|---|---|---|
| ಸಾಕ್ಷಿ ಹೆಸರು | - | ದೇವರಾಜ |
| ತಂದೆ ಹೆಸರು | - | ವೀರಭದ್ರಪ್ಪಗೌಡ |
| ವಯಸ್ಸು | - | 49 ವರ್ಷ |
| ಉದ್ಯೋಗ | - | ವ್ಯವಸಾಯ |
| ವಿಳಾಸ: | - | ಹೆಗ್ಗಟ್ಟು ಗ್ರಾಮ, ಸಾಗರ ತಾಲ್ಲೂಕು. |

ಪ್ರಮಾಣ ವಚನ ಭೋದಿಸಿದ ದಿನಾಂಕ: 21-10-2022.

<u>ಮುಖ್ಯ ವಿಚಾರಣೆ: ಮಾನ್ಯ ಸರಕಾರಿ ಅಭಿಯೋಜಕರವರಿಂದ:</u>

1 ನೇ ಆರೋಪಿ ನಮ್ಮ ಊರಿನವರಾಗಿದ್ದು ನನಗೆ ಪರಿಚಯವಿರುತ್ತಾರೆ. ಪ್ರಾಸಾ-1 ನನಗೆ ಗೊತ್ತು. ಚಾಸಾ-6 ಮತ್ತು ಚಾಸಾ-7 ರವರು ಗೊತ್ತು. ಆರೋಪಿತರು ಮತ್ತು ಪ್ರಾಸಾ-1 ರವರ ನಡುವೆ ಗಲಾಟೆಯಾದ ವಿಚಾರ ನನಗೆ ಗೊತ್ತಿಲ್ಲ. ಪ್ರಾಸಾ-1 ರವರಿಗೆ ಪೆಟ್ಟಾಗಿದ ವಿಚಾರ ನನಗೆ ಗೊತ್ತಿಲ್ಲ. ಈಗ್ಗೆ ಸುಮಾರು 2 ವರ್ಷಗಳ ಹಿಂದೆ ಪ್ರಾ ಸಾ-1 ರವರ ತೋಟಕ್ಕೆ ಪೋಲೀಸರು ಬಂದಿರುತ್ತಾರೆ. ಆ ಸಮಯದಲ್ಲಿ ನಾನು ನಮ್ಮ ಊರಿಗೆ ಹೋಗುತ್ತಿದ್ದೆ. ಪೋಲೀಸರು ಮಹಜರ್ ಗೆ ಸಹಿ ಮಾಡಬೇಕು ಎಂದು ನನ್ನನ್ನು ಕರೆದಿರುತ್ತಾರೆ. ಪೋಲೀಸರು ಹೆಬ್ಬರಿಗೆ ಗ್ರಾಮದ ಬೆಟ್ಟದಲ್ಲಿ ಮಹಜರ್ ಗೆ ಸಹಿ ಹಾಕು ಎಂದು ನನ್ನನ್ನು ಕರೆದಿರುತ್ತಾರೆ. ಸದರಿ ಸ್ಥಳದಲ್ಲಿ ಏನು ನಡೆದಿತ್ತು ಎಂಬ ವಿಷಯ ನನಗೆ ಗೊತ್ತಿಲ್ಲ. ನಾನು ಪೋಲೀಸರಿಗೆ ಗಲಾಟೆಯಾದ ಸ್ಥಳವನ್ನು ತೋರಿಸಿರುವುದಿಲ್ಲ.

ಪೋಲೀಸರ ಮುಂದೆ ನಾನು ಯಾವುದೇ ವಸ್ತುವನ್ನು ಹಾಜರುಪಡಿಸಿಲ್ಲ. ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ ಸದರಿ ದಾಖಲೆ ಅಮಾನತ್ತು ಸ್ಥಳ ಪಂಚನಾಮೆಯಾಗಿದ್ದು

ಅದನ್ನು ನಿಪಿ -5 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ -5(ಎ) ಎಂದು ಗುರುತಿಸಲಾಯಿತು.

(ಈಗ ನ್ಯಾಯಾಲಯದ ಮುಂದೆ, ಮಹಜರ್ ಕಾಲಕ್ಕೆ ಜಪ್ತಿ ಮಾಡಿದ ಸ್ವತ್ತನ್ನು ಬಿಳಿಬಟ್ಟೆಯಿಂದ ಸುತ್ತಿ ಪ್ಯಾಕ್ ಮಾಡಿ ಸೀಲು ಹಾಕಿದ್ದನ್ನು, ಅದನ್ನು ತೆರೆದ ನ್ಯಾಯಾಲಯದಲ್ಲಿ ಸೀಲುಗಳನ್ನು ಬಿಚ್ಚಿ ನೋಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು, ಅದರಂತೆ ಸದರಿ ಸ್ವತ್ತಿನ ಸೀಲ್ ಬಿಚ್ಚಿ ತೆರೆಯಲಾಯಿತು)

ಮು ಮಾ -4 ನ್ನು ಪೋಲೀಸರು ಅವರ ಜೀಪಿನಿಂದ ತಂದಿರುತ್ತಾರೆ.

ಮು ಮಾ -4 ಕ್ಕೆಸಂಬಂಧಪಟ್ಟ ಗುಂಡುಗಳು ಎಲ್ಲಿದ್ದವು ಎಂದು ನನಗೆ ಗೊತ್ತಿಲ್ಲ.

ಮಹಜರ್ ಮಾಡುವ ಸಮಯದಲ್ಲಿ ಪೋಲೀಸರು ನನಗೆ ಏನನ್ನೂ ಜಾರಿ ಮಾಡಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಅದು ಪಂಚರಿಗೆ ನೀಡಿದ ನೋಟೀಸ್ ಆಗಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ -6 ಎಂದು ಸಾಕ್ಷಿಯ ಸಹಿಯನ್ನು ನಿಪಿ -6 ಎ ಎಂದು ಗುರುತಿಸಲಾಯಿತು. ಪಂಚನಾಮೆ ಮಾಡುವ ಸಮಯದಲ್ಲಿ ಪೋಲೀಸರು ಮತ್ತೇನು ಮಾಡಿದರು ಎಂದು ನನಗೆ ನೆನಪಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಅದು ನಕ್ಷೆ ಆಗಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ -7 ಎಂದು ಸಾಕ್ಷಿಯ ಸಹಿಯನ್ನು ನಿಪಿ -7 ಎ ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಿದ್ದು ಸದರಿ ಫೋಟೋದಲ್ಲಿ ಬಂದೂಕನ್ನು ಹಿಡಿದುಕೊಂಡ ವ್ಯಕ್ತಿ ಕೇಶವಮೂರ್ತಿ ಎಂದು ನುಡಿಯುತ್ತಾರೆ. ಸದರಿ ಫೋಟೋವನ್ನು ನಿಪಿ -8 ಎಂದು ಗುರುತಿಸಲಾಯಿತು. ನಿಪಿ -8 ರಲ್ಲಿ ನೇರಳೆ ಬಣ್ಣದ ಹಾಫ್ ತೋಳಿನ ಶರ್ಟ್ ಧರಿಸಿದ್ದು ಕೈ ಕಟ್ಟಿಕೊಂಡ ವ್ಯಕ್ತಿ ನಾನೇ ಆಗಿರುತ್ತೇನೆ. ನಿಪಿ -7 ಕ್ಕೆ ನಾನು ಸಹಿಯನ್ನು ಹೆಬ್ಬರಗಿ ಗುಡ್ಡದಲ್ಲಿ ಸಹಿ ಮಾಡಿರುತ್ತೇನೆ . ನಿಪಿ -8 ನ್ನು ಪೋಲೀಸರು ಅದೇ ಗುಡ್ಡದಲ್ಲಿ ತೆಗೆದಿರುತ್ತಾರೆ. ನಿಪಿ -7 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ , ನಾನು ಸಹಿ ಮಾಡಿದಾಗ ಅದು ಖಾಲಿ ಇತ್ತು. ನಿಪಿ -8 ರಲ್ಲಿ 1 ನೇ ಆರೋಪಿ ಬಂದೂಕನ್ನು ಹಿಡಿದುಕೊಂಡಿರುತ್ತಾರೆ. ನಿಪಿ -8 ರಲ್ಲಿ ಕಂಡು

ಬರುವ  ಬಂದೂಕು ಮು ಮಾ -4 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿಲ್ಲ.

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>

ದಿನಾಂಕಃ 13-03-2016 ರಂದು ಬೆಳಿಗ್ಗೆ ಸಾಗರದಿಂದ ಹೆಬ್ಬಟ್ಟುವಿನಲ್ಲಿದ್ದ ಅಡಿಕೆ ತೋಟವನ್ನು ನೋಡಿಕೊಂಡು ಬರೋಣ ಎಂದು ಹೊರಟಿದ್ದು ಬೆಳಿಗ್ಗೆ 11 -30 ಗಂಟೆಗೆ  ಹೆಬ್ಬುರಿಗಿ ವಾಸಿ ಕೇಶವ ಮೂರ್ತಿರವರ ಮನೆ ಮುಂದಿನ ಪುಟ್ಟಸ್ವಾಮಿ ಹಿಸ್ಸೆಗೆ ಬಂದ ಹಾಳು ಬಿದ್ದ ಜಮೀನಿನಲ್ಲಿ ಗಲಾಟೆ ಸದ್ದು ಕೇಳಿ ನಾನು ಅಲ್ಲಿಗೆ ಓಡಿ ಹೋದೆ, ಮತ್ತೊಂದು ಕಡೆಯಿಂದ ವೀರೇಂದ್ರಗೌಡರು ಸದಾಶಿವಪ್ಪ , ನನ್ನ ಅಣ್ಣ ಈಶ್ವರರವರು ಓಡಿ ಬಂದು ನೋಡಲಾಗಿ ಪುಟ್ಟಸ್ವಾಮಿ ತನ್ನ ಹಾಳು ಬಿದ್ದ ತರಿ ಜಮೀನಿನಲ್ಲಿ ಊರು ಹಾಳುಗಿಡ ಇತ್ಯಾದಿ ಸವರುತ್ತಿದ್ದಾಗ , ಕೇಶವಮೂರ್ತಿ , ಆತನ ಪತ್ನಿ ಮಮತಾ , ಅಕ್ಕನ ಮಗ ರವೀಂದ್ರ ರವರು ಸೇರಿಕೊಂಡು ಕೇಶವಮೂರ್ತಿ ಕೈಯ್ಯಲ್ಲಿ ಬಂದೂಕು ಹಿಡಿದುಕೊಂಡು , ಪುಟ್ಟಸ್ವಾಮಿಗೆ ನಮ್ಮ ಅಡಿಕೆ ತೋಟಕ್ಕೆ ಏಕೆ ಬರುತ್ತಿದ್ದೀಯಾ ಎಂದು ಕೆಟ್ಟದಾಗಿ ಬೈದು ರವೀಂದ್ರ ಕೈಯಿಂದ ಕೆನ್ನೆಗೆ ಹೊಡೆದಿದ್ದು ಕೇಶವಮೂರ್ತಿ ಕೈಯಿಂದ ಆತನ ಪತ್ನಿಮಮತಾ ಗನ್ ಕಸಿದುಕೊಂಡು , ಪುಟ್ಟಸ್ವಾಮಿಯನ್ನು ಸಾಯಿಸುವ ಉದ್ದೇಶದಿಂದಲೇ ಎದೆಗೆ ಮುಖ ಮಾಡಿ ಫೈರ್ ಮಾಡಿದ್ದು ಆತನ ಎಡ ತೊಡೆಗೆ ಗುಂಡು ಹೊಕ್ಕು ರಕ್ತಗಾಯವಾಯಿತು ಎಂದರೆ ಸರಿಯಲ್ಲ.

ಜಮೀನಿನ ಹಿಸ್ಸೆ ವಿಚಾರದಲ್ಲಿನ ಗೊಂದಲದಲ್ಲಿ ಪುಟ್ಟಸ್ವಾಮಿಯನ್ನು ಸಾಯಿಸುವ ಉದ್ದೇಶದಿಂದಲೇ ಮೇಲ್ಕಂಡ ಆರೋಪಿತರು ಆತನ ಮೇಲೆ ಗಲಾಟೆ ಮಾಡಿ ಕೈಯಿಂದ ಕೆನ್ನೆಗೆ

ಬಂದೂಕಿನಿಂದ ಮಮತಾ ತೊಡೆಗೆ ಹೊಡೆದು ಮಾರಣಾಂತಿಕ ಹಲ್ಲೆ ನಡೆಸಿರುತ್ತಾರೆ ಎಂದರೆ ಸರಿಯಲ್ಲ.

ಗಾಯಗೊಂಡ ಪುಟ್ಟಸಾಮಿಯು ಚಿಕಿತ್ಸೆಗಾಗಿ ಸಾಗರ ಆಸ್ಪತ್ರೆಗೆ ಹೋದನು ಎಂದರೆ ಸರಿಯಲ್ಲ. ನನಗೆ ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ಈ ರೀತಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ -9 ಎಂದು ಗುರುತಿಸಲಾಯಿತು.

ದಿಃ16-03-2016 ರಂದು ಮದ್ಯಾಹ್ನ 1-00 ಗಂಟೆಗೆ ಹೆಬ್ಬರಿಗೆ ಗ್ರಾಮದ ಘಟನಾ ಸ್ಥಳದಲ್ಲಿ ನಿಪಿ - 6 ರಂತೆ ನನಗೆ ಪಂಚನಾಮೆಗೆ ಸಹಕರಿಸಲು ಪೋಲೀಸರು ನೋಟೀಸ್ ಜಾರಿ ಮಾಡಿದ್ದರು ಎಂದರೆ ನನಗೆ ನೆನಪಿಲ್ಲ. ಆ ದಿನ ನಾನು ಚಾಸಾ-6 ಮತ್ತು ಚಾಸಾ 7 ರವರ ಸಮಕ್ಷಮ ಆರೋಪಿತರು ಪುಟ್ಟಸ್ವಾಮಿ ಇವರ ಮೇಲೆ ಹಲ್ಲೆ ಮಾಡಿದ ಸ್ಥಳವನ್ನು ಪೋಲಿಸೇರಿಗೆ ತೋರಿಸಿರುತ್ತೇನೆ , ಪೋಲೀಸರು ಅದನ್ನು ಪರಿಶೀಲಿಸಿದ್ದು ಅದೇ ಸಮಯದಲ್ಲಿ 1 ನೇ ಆರೋಪಿ, ಆತನ ಪತ್ನಿ ಗುಂಡು ಹಾರಿಸಿದ ಮು ಮಾ -4 ಬಂದೂಕನ್ನು , ಚಿಕ್ಕ ರಟ್ಟಿನ ಬಾಕ್ಸ ನಲ್ಲಿರುವಂತಹ 75 ಸೀಸದ ಗುಂಡುಗಳನ್ನು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ ಅದನ್ನು ಪೊಲೀಸರು ಮದ್ಯಾಹ್ನ 1 ರಿಂದ 2 ಗಂಟೆ ವರೆಗೆ ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡು ನಿಪಿ - 6 ರಂತೆ ಪಂಚನಾಮೆ ಜರುಗಿಸಿದರು , ಅದೇ ಸಮಯದಲ್ಲಿ ನಿಪಿ -8 ರಂತೆ ಫೋಟೋ ತೆಗೆಸಿ ನಿಪಿ -7 ರಂತೆ ನಕ್ಷೆ ತಯಾರಿಸಿದರು, ಸದರಿ ಪಂಚನಾಮೆಯನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದಿರುವ ಮು ಮಾ -4 ಬಂದೂಕನ್ನು ಹಾಗೂ ಅದಕ್ಕೆ ಸಂಬಂಧಪಟ್ಟ ಗುಂಡುಗಳನ್ನು ಪೋಲೀಸರು ನನಗೆ ತೋರಿಸಿದರು ಎಂದರೆ ಸರಿಯಲ್ಲ.

ಈ ಎಲ್ಲಾ ವಿಷಯಗಳು ನನಗೆ ಗೊತ್ತಿದ್ದರೂ ಸಹ ಆರೋಪಿತರು ನಮ್ಮ ಊರಿನವರಾಗಿದ್ದರಿಂದ ಹಾಗೂ 1 ನೇ ಆರೋಪಿ ನನಗೆ ಬೇಕಾದವರಾಗಿದ್ದರಿಂದ ಪೋಲೀಸರ ಮುಂದೆ ನಿಪಿ -9 ರಂತೆ ಹೇಳಿಕೆ ನೀಡಿದ್ದರೂ ಸಹ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**</u>

**ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲಾ ಎಂದು ತಿಳಿಸಿರುತ್ತಾರೆ**

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)**

**ಓ ಹೇ ಕೇ ಸ ಇದೆ**

**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಶಿವಮೊಗ್ಗ (ಪೀಠಾಸೀನ, ಸಾಗರ).**